ಸಮುದಾಯದ ಪುರುಷ ಆಗಿರುವುದರಿಂದ ನೀನು ಕಿತಾಬಿಯಾ ಮಹಿಳೆಯನ್ನು ಮದುವೆಯಾಗಲು ಅವಕಾಶವಿತ್ತು. ಕಿತಾಬಿಯ ಎಂದರೆ ಯಾರಿಗೆ ಅಪೌರುಷೇಯವಾಗಿ ಅವತೀರ್ಣವಾದ ಧರ್ಮ ಗ್ರಂಥಗಳ ಮೂಲಕ ಅಧಿಕೃತತೆ ದೊರೆತಿದೆಯೋ ಅಂತಹ ಧರ್ಮದ ಜನರೆಲ್ಲರೂ ಕಿತಾಬಿಯಗಳು. ಅದೊಂದು ದಿನ ನಮ್ಮ ಮನೆಯಲ್ಲಿ ನಡೆದ ಯಾವುದೋ ಪುಟ್ಟ ಸಮಾರಂಭದಲ್ಲಿ ಸೇರಿದ್ದ ಗಂಡಸರು ಊಟವಾದ ನಂತರ ಹಾಲ್‌ನಲ್ಲಿ ಹರಡಿಕೊಂಡಿದ್ದರು. ನನ್ನ ದೊಡ್ಡಪ್ಪ, ಚಿಕ್ಕಪ್ಪ ಸೋದರ ಮಾವ ಮೊದಲಾದ ಹಿರಿಯರು ಮತ್ತವರ ಗಂಡು ಮಕ್ಕಳು ಸೇರಿ ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ನಿನ್ನ ಪ್ರಸ್ತಾಪವಾಗಬೇಕಾದುದು ನಿರೀಕ್ಷಿತವೆ ಆಗಿತ್ತು. ಅದಕ್ಕಿಂತ ವರ್ಣರಂಜಿತ ಸುದ್ದಿ ಇನ್ನು ಯಾವುದಾಗಲು ಸಾಧ್ಯವಿತ್ತು? ಅಮ್ಮಿ ಅವರೆಲ್ಲರ ಸಂಜೆಯ ಉಪಹಾರಕ್ಕೆಂದು ಶಾಮಿ ಕಬಾಬ್ ಕರಿಯುತ್ತಿದ್ದಳು. ನಾನು ಸಹಾಯ ಮಾಡುತ್ತಿದ್ದೆ. ಹೀಗಾಗಿ ಅವರೆಲ್ಲರ ಮಾತುಗಳು ನಾವಿದ್ದ ಕಡೆಯಲ್ಲಿಯೇ ಅಪ್ಪಳಿಸುತ್ತಿದ್ದವು. ಸಾಲಾರ್ ದೊಡ್ಡಪ್ಪ ಹೇಳುತ್ತಿದ್ದರು, “ಮುಸ್ಲಿಮ್ ಪುರುಷನು ಮುಸ್ಲಿಮ್ ಮಹಿಳೆಯೊಂದಿಗೆ ಮಾತ್ರವಲ್ಲದೆ ಕಿತಾಬಿಯಾ ಮಹಿಳೆಯೊಂದಿಗೆ ಅಂದರೆ, ಯಹೂದಿ ಅಥವಾ ಕ್ರೈಸ್ತ ಮತ ಧರ್ಮಕ್ಕೆ ಸೇರಿದ ಮಹಿಳೆಯೊಂದಿಗೆ ವಿವಾಹವನ್ನು ಮಾಡಿಕೊಳ್ಳಬಹುದು. ಆದರೆ, ವಿಗ್ರಹಾರಾಧಕಿ ಅಥವಾ ಅಗ್ನಿ ಆರಾಧಕಿಯೊಂದಿಗೆ ಮದುವೆ ಮಾಡಿಕೊಳ್ಳುವಂತಿಲ್ಲ. ಒಂದು ವೇಳೆ ಸದರಿ ವಿಗ್ರಹಾರಾಧಕಿ ಅಥವಾ ಅಗ್ನಿ ಆರಾಧಕಿಯೊಂದಿಗೆ ಮದುವೆ ಮಾಡಿಕೊಂಡಲ್ಲಿ ಸದರಿ ಮದುವೆಯು ಅನೂರ್ಜಿತವಾಗುವುದಿಲ್ಲ. ಬದಲಿಗೆ ಕ್ರಮಬದ್ಧವಲ್ಲವೆನಿಸುತ್ತದೆ.'' ಈ ಕಿತಾಬಿಯ ಹೆಣ್ಣುಮಕ್ಕಳೊಡನೆ ಮದುವೆಯಾದಲ್ಲಿ ಅವರು ಇಸ್ಲಾಂಗೆ ಮತಾಂತರವಾಗುವ ಗೋಜಿಲ್ಲ ಎಂದು ಮುಸ್ಲಿಮ್ ಪುರುಷರಿಗೆ ದೊರಕಿರುವ ಸ್ವಾತಂತ್ರ್ಯವು ಈ ರೀತಿಯಲ್ಲಿ ಸದುಪಯೋಗವಾಗುತ್ತಿದೆ ಎಂದು ನಾನು ನನ್ನ ವೈಯುಕ್ತಿಕ ಅನುಭವದಿಂದ ಕಲಿತೆ.

ಈ ಎಲ್ಲಾ ಸಂದರ್ಭಗಳಲ್ಲಿ ಕೂಡ ನಾನು ಒಂಟಿ ಅಂತ ಅನ್ನಿಸಲೇ ಇಲ್ಲ. ಯಾಕೆಂದರೆ, ಉದ್ದಕ್ಕೂ ಸುರಯ್ಯ ಆಂಟಿ ನನ್ನಲ್ಲಿಯೇ ಇರುತ್ತಿದ್ದರು; ನನ್ನ ಕೈ ಹಿಡಿದುಕೊಂಡೇ ಇರುತ್ತಿದ್ದರು; ನನ್ನ ಭುಜವನ್ನು ಆಲಂಗಿಸಿ ಇರುತ್ತಿದ್ದರು; ಹೀಗಾಗಿ ಏಕಾಂಗಿಯಾಗಿಯೂ ದುಃಖಿತಳಾಗಿರಲಿಲ್ಲ. ಬದಲಿಗೆ ಸಮಾಧಾನವಾಗಿದೆ ಎಂಬ ಅನಿಸಿಕೆ ನನ್ನಲ್ಲಿ ಮೂಡಿತು. ಈ ಸಂದರ್ಭದಲ್ಲಿ ನಾನು ನಿನಗೆ ಕೇಳುವ ಪ್ರಶ್ನೆ ಏನೆಂದರೆ, ವಸುಮತಿಯಲ್ಲಿ ನೀನು ಯಾವ ಬೆಡಗನ್ನು ಕಂಡೆ? ಅವಳ ಕಣ್ಣುಗಳು ವಿಶಾಲವಾಗಿದ್ದವೇ? ನೀನು ಅವುಗಳಲ್ಲಿ ಮುಳುಗಿ ಹೋದೆಯಾ? ಅವಳ ಮೈಬಣ್ಣ ನನ್ನಷ್ಟು ಚೆಂದಕ್ಕೆ ಇರಲು ಸಾಧ್ಯವೇ ಇಲ್ಲ. ಅವಳು ನಸುಗಪ್ಪು ಎಂದು ಕೇಳಿದ್ದೇನೆ. ಅವರಿವರಿಂದ ಅವಳ ಚಾಲಾಕಿತನ ಅವಳ ಮಾತುಕತೆಯೋ ಅವಳ ಬುದ್ಧಿಮತ್ತೆಯೋ ಯಾವುದು ನಿನ್ನನ್ನು ಆಕರ್ಷಿಸಿದ್ದು?

ಈ ಆಕರ್ಷಣೆಯ ರಹಸ್ಯವನ್ನು ನಾನು ತಿಳಿದುಕೊಳ್ಳಲೇ ಬೇಕಿದೆ. ಏಕೆಂದರೆ, ನಾನೊಬ್ಬ ಹೆಣ್ಣು ಮತ್ತು ಪರಾಜಿತೆ ಎಂಬ ಶಾಶ್ವತವಾದಂತಹ ಕಲೆಯನ್ನು ನಿನ್ನಿಂದ ಪಡೆಯಲು ನಾನು ಸಿದ್ಧಳಿಲ್ಲ. ನನಗೆ ನಾನೇ ಹೇಳಿಕೊಳ್ಳುವ ಸತ್ಯವೆಂದರೆ ನಾನೊಬ್ಬ ಹೆಣ್ಣು. ಪಕ್ಕದಲ್ಲಿರುವ ಸುರಯ್ಯ ಆಂಟಿ ಹೇಳುತ್ತಾರೆ ನೀನೊಬ್ಬ ಪರಿಪೂರ್ಣ ಹೆಣ್ಣು ಕಂದ; ನಿನಗೆ ಅಂಜಿಕೆ ಏನೂ ಬೇಡ. ಹೀಗಿರುವಲ್ಲಿ ಎಲ್ಲರೂ ನನ್ನಲ್ಲಿ ಕಂಡ ಪರಿಪೂರ್ಣ ಹೆಣ್ತನವನ್ನು ನೀನು ಪಕ್ಕಕ್ಕೆ ಸರಿಸಿ ನೀನು ವಸುಮತಿಯ ಭಾವ ಬಂಧನದಲ್ಲಿ ಸಿಲುಕಿ ಆಕೆಗಾಗಿ ಎಲ್ಲವನ್ನೂ ತಿರಸ್ಕರಿಸುವಂತಹ ಮಟ್ಟಕ್ಕೆ ಮುಟ್ಟಲು ಅದೆಂತಹ ಅದಮ್ಯ ಶಕ್ತಿ ಅವಳಲ್ಲಿದೆ ಎಂದು ಆಗಾಗ ನಾನು ಅವಳ ಬಗ್ಗೆ ಕರುಬುವುದಿದೆ.

ನೀನು ಈ ಪ್ರಪಂಚದ ಕೊನೆಯ ಗಂಡು ಅಂತ ಏನೂ ಅಲ್ಲವಲ್ಲ. ಹೀಗಾಗಿ ನನ್ನ ಮನೆಯವರು ಆಸ್ಥೆವಹಿಸಿ ನನಗಾಗಿ ಹುಡುಕಿ ತೆಗೆದ ವಸೀಮ್‌ನೊಂದಿಗೆ ನಾನು ಈಗ ದುಬೈನಲ್ಲಿ ಇದ್ದೇನೆ. ಸುಖವಾಗಿದ್ದೀಯಾ ಎಂದು ನೀನು ಕೇಳುವ ಪ್ರಮೇಯವೂ ಇಲ್ಲ.